ಕನ್ನಡ ಕಾಯಕ ಮಾಲೆ - ೪೭

ಕರ್ನಾಟಕ ಸರ್ಕಾರ
ಕನ್ನಡ ಅಭಿವೃದ್ಧಿ [illegible]

# ಪ್ರಬಂಧಮಂ[illegible]ಷಾ

ಅಂತಾರಾಷ್ಟ್ರೀಯ [illegible] ಸರಣಿ
ವಿಚಾರಗೋಷ್ಠಿಗ[illegible]ತವಾದ
ಲೇಖನ[illegible]ಗ್ರಹ

ಸ[illegible]ಾದಕರು
**ಡಾ. ಮಲ್ಲನಗೌಡ. ಎಸ್**

ಸಹ ಸಂಪಾದಕರು
**ವಿದ್ವಾನ್ ಆರ್. ಜಗನ್ನಾಥ ಪೂಜಾರ್**
**ಡಾ. ತೇಜಸ್ವಿನಿ ಬಿದರಿ**

ಕನ್ನಡ ಕಾಯಕ ವರ್ಷ

ಕನ್ನಡ ಕಾಯಕ ಮಾಲೆ – ೪೭

ಕರ್ನಾಟಕ ಸರ್ಕಾರ

ಕನ್ನಡ ಅಭಿವೃದ್ಧಿ ಪ್ರಾಧಿಕಾರ

# ಪ್ರಬಂಧಮಂಜೂಷಾ

## ಅಂತಾರಾಷ್ಟ್ರೀಯ ಅಂತರ್ಜಾಲ ಸರಣಿ ವಿಚಾರಗೋಷ್ಠಿಗಳಲ್ಲಿ ಮಂಡಿತವಾದ ಲೇಖನಗಳ ಸಂಗ್ರಹ


ಸಂಪಾದಕರು:

ಡಾ. ಮಲ್ಲನಗೌಡ. ಎಸ್

ಸಹ ಸಂಪಾದಕರು:

ವಿದ್ವಾನ್ ಆರ್.ಜಗನ್ನಾಥ ಪೂಜಾರ್

ಡಾ. ತೇಜಸ್ವಿನಿ ಬಿದರಿ



ಪ್ರಕಾಶಕರು:

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಚಾಮರಾಜಪೇಟೆ ಬೆಂಗಳೂರು ೫೬೦ ೦೧೮.

"PRABANDHAMANJUSHA"-The Collection of Articles Presented in the International Webinar Series, Editor: Dr. Mallanagowda.S., Co Editors: Vidwan R. Jagannatha Pujar and Dr. Thejasvini Bidari, Published by: Karnataka Samskrit University Chamarajpet, Bengaluru 560018.

© Karnataka Samskrit University

| | | |
|---|---|---|
| First Impression | : | 2022 |
| Copies | : | 500 |
| Pages | : | xxviii + 228 = 256 |
| Used Paper | : | 80 GSM N.S. Maplitho |
| Price Rs | : | 180/- |
| ISBN No. | : | 978-81-950693-0-9 |

ಈ ಕೃತಿಯು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಧನಸಹಾಯದಿಂದ ಪ್ರಕಟವಾಗಿದೆ.

"ಪ್ರಬಂಧಮಂಜೂಷಾ" ಅಂತಾರಾಷ್ಟ್ರೀಯ ಅಂತರ್ಜಾಲ ಸರಣಿ ವಿಚಾರಗೋಷ್ಠಿಗಳಲ್ಲಿ ಮಂಡಿತವಾದ ಲೇಖನಗಳ ಸಂಗ್ರಹ. ಸಂಪಾದಕರು: ಡಾ. ಮಲ್ಲನಗೌಡ ಎಸ್., ಸಹ ಸಂಪಾದಕರು: ಡಾ. ವಿದ್ವಾನ್ ಆರ್ ಜಗನ್ನಾಥ ಪೂಜಾರ್ ಮತ್ತು ಡಾ. ತೇಜಸ್ವಿನಿ ಬಿದರಿ. ಪ್ರಕಾಶಕರು: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು ೫೬೦೦೧೮.

© ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

| | | |
|---|---|---|
| ಮೊದಲ ಮುದ್ರಣ | : | ೨೦೨೨ |
| ಪ್ರತಿಗಳು | : | ೫೦೦ |
| ಪುಟಗಳು | : | xxviii + ೨೨೮ = ೨೫೬ |
| ಬಳಸಿದ ಕಾಗದ | : | ೮೦ ಜಿ.ಎಸ್.ಎಮ್.ಎನ್.ಎಸ್. ಮ್ಯಾಪ್ಲಿಥೋ |
| ಬೆಲೆ ರೂ | : | ೧೮೦/- |
| ಐಎಸ್‌ಬಿಎನ್ ಸಂ. | : | ೯೭೮-೮೧-೯೫೦೬೯೩-೦-೯ |
| ಅಕ್ಷರ ವಿನ್ಯಾಸ | : | ಸಿದ್ವಿನ್ ಗ್ಲೋಬಲ್ ಸಲ್ಯೂಷನ್ಸ್, ಬೆಂಗಳೂರು-೧೮. |
| ಮುಖಪುಟ | : | ವೈಟ್ ಸ್ಟೋನ್ |
| ಮುದ್ರಣ | : | ಪವನ್ ಪ್ರಿಂಟರ್ಸ್ ಚಾಮರಾಜಪೇಟೆ ಬೆಂಗಳೂರು-೧೮ |

# ಪರಿವಿಡಿ


೧. ವಚನ ಸಾಹಿತ್ಯ ಮತ್ತು ಸಂಸ್ಕೃತ ಸಾಹಿತ್ಯ:ಒಂದು ತೌಲನಿಕ ದೃಷ್ಟಿಕೋನ

(ಅ) ವಚನ ಸಾಹಿತ್ಯ ಮತ್ತು ಶಿವಾಗಮಗಳು ೧–

– ಡಾ. ಸಿ. ಶಿವಕುಮಾರ ಸ್ವಾಮಿ

(ಆ) ವಚನ ಸಾಹಿತ್ಯ ಮತ್ತು ವೇದೋಪನಿಷತ್ತುಗಳು" ೩೧–

– ಡಾ. ಶರತ್ ಚಂದ್ರ ಸ್ವಾಮಿ

೨. ಸಂಸ್ಕೃತ ಸಾಹಿತ್ಯ ಮತ್ತು ಸಂಗೀತ

(ಅ) ಸಂಗೀತ ಮತ್ತು ಸಂಸ್ಕೃತ ಭಾಷೆಯ ಅವಿನಾಭಾವ ಸಂಬಂಧ

– ಡಾ. ಸರ್ವಮಂಗಳಾ ಶಂಕರ್ ೪೯–

೩. ಸಂಸ್ಕೃತ ಸಾಹಿತ್ಯ ಮತ್ತು ದಾಸ ಸಾಹಿತ್ಯ

(ಅ) ಸಂಸ್ಕೃತ ಸಾಹಿತ್ಯದ ಸವಿಯನ್ನು ಸವಿಸಿದ ಹರಿದಾಸ ಸಾಹಿತ್ಯ ೬೭–

– ವಿದ್ವಾನ್ ಕಲ್ಲಾಪುರ ಪವಮಾನಾಚಾರ್

(ಆ) ಹರಿದಾಸರ ಮುಂಡಿಗೆ ಸಾಹಿತ್ಯ ೭೦–೭

– ಡಾ. ವಿನಾಯಕ ನಾಮಣ್ಣವರ,

೪. ಸಂಸ್ಕೃತ ಸಾಹಿತ್ಯ ಮತ್ತು ಕ್ರೀಡೆ

(ಅ) ಸಂಸ್ಕೃತ ಇತಿಹಾಸ ಗ್ರಂಥಗಳಲ್ಲಿ ಕ್ರೀಡೆ ೮೦–೮

– ಡಾ. ಹೆಚ್. ಸತ್ಯನಾರಾಯಣಾಚಾರ್,

(ಆ) ಸಂಸ್ಕೃತ ಕಾವ್ಯಗಳಲ್ಲಿ ಕ್ರೀಡೆ ೮೪–೯೦

– ವಿದ್ವಾನ್ ಶ್ರೀನಿವಾಸಮೂರ್ತಿ

(ಇ) ಸಂಸ್ಕೃತ ಭಾಷೆಯಲ್ಲಿ ಕ್ರೀಡೆ ೯೧–೯೩

– ವಿದ್ವಾನ್ ವಿಷ್ಣುಕಶ್ಯಪಾಚಾರ್

# (೮) ಹರಿದಾಸರ ಮುಂಡಿಗೆ ಸಾಹಿತ್ಯ

✍ ಡಾ. ವಿನಾಯಕ ನಾಮಣ್ಣವರ,

ಹರಿದಾಸ ಸಾಹಿತ್ಯ ತಾತ್ತ್ವಿಕವಾಗಿ ಅತಿಪ್ರಾಚೀನ. ಶ್ರೀಹರಿಯನ್ನು ತಿಳಿಸುವ ಸಾಹಿತ್ಯವೇ ಹರಿದಾಸ ಸಾಹಿತ್ಯ. ವೇದಗಳು ಮೊದಲ ಹರಿದಾಸ ಸಾಹಿತ್ಯ.

**ವೇದೈಶ್ಚ ಸರ್ವೈಃ ಅಹಮೇವ ವೇದ್ಯಃ – ಗೀತಾ**

**ಅತೋ ಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ!**

**ಮಹಸ್ತೆ ವಿಷ್ಣೋ ಸುಮತಿಂ ಭಜಾಮಹೇ!! ಋಗ್ವೇದ ೧.೧೫೬.೨**

**ಸೋಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಮ್ (ಕಾಠಕ)**

ವೇದಗಳೆಲ್ಲವೂ ಶ್ರೀಹರಿಯನ್ನೇ ತಿಳಿಸುವವು. ವೇದದಲ್ಲಿ, ಪೌರುಷೇಯ ವಾಙ್ಮಯದಲ್ಲಿ ಶ್ರೀಹರಿಯೇ ಸರ್ವೋತ್ತಮನೆಂದು ಪ್ರತಿಪಾದಿತನಾಗಿರುವ. ವಿಷ್ಣುವಿನ ಉಪಾಸನೇಯಿಂದಲೇ ಪರಮಪದ, ಮೋಕ್ಷದ ಪ್ರಾಪ್ತಿ. ಇದೇ ವೇದ ಉಪನಿಷತ್ತುಗಳ ಸಂದೇಶ.

**ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ ॥**

**ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ ॥" – ಹರಿವಂಶ.**

ಭಾರತೀಯ ಸಮಗ್ರ ಆಧ್ಯಾತ್ಮಿಕ ವಾಙ್ಮಯದ ಏಕಮೇವ ಸಿದ್ಧಾಂತ. ವಿಷ್ಣು ಸರ್ವೋತ್ತಮನೆಂಬ ಸಿದ್ಧಾಂತ. ಹರಿಯು ಹೆದ್ದೈವನೆಂದು, ತಾವೆಲ್ಲರೂ ಅವನ ದಾಸರು, ಎಂದಿಗೂ ಅವನಾಗುವುದಿಲ್ಲವೆಂದು ಬಗೆದು ಅವನಲ್ಲಿ ಭಕ್ತಿ ಮಾಡುವದೇ ಹರಿದಾಸ ಸಿದ್ಧಾಂತ. ಈ ಸಿದ್ಧಾಂತವನ್ನು ಈ ಸಮಗ್ರ ವಾಙ್ಮಯದ ಹಿನ್ನೆಲೆಯಲ್ಲಿ ಅರಿತು, ಆಚರಿಸಿ, ವಿವಿಧ ಪ್ರಾದೇಶಿಕ ಭಾಷೆಯಲ್ಲಿ ಪ್ರಕಟಿಸಿದರು. ಇದೂ ಹರಿದಾಸ ಸಾಹಿತ್ಯ. ಜನರಿಗೆ ಅಭಿಮುಖವಾಗಿ ಬೆಳೆದದ್ದು ಈ ಹರಿದಾಸ ಸಾಹಿತ್ಯ. ಸನಾತನ ವೈದಿಕ ವಿಚಾರಗಳೆಲ್ಲವೂ ಹರಿದಾ ಸಾಹಿತ್ಯದ ಮೂಲಕ ಜನಪರವಾದವು. ವೇದಶಾಸ್ತ್ರಗಳು ಹರಿದಾಸ ಸಾಹಿತ್ಯದ ಮೂಲಕ ಸಮಕಾಲೀನ ಸಮಾಜದೊಂದಿಗೆ ಮಾತನಾಡತೊಡಗಿದವು. ಸನಾತನ ವೈಷ್ಣವ ಪರಂಪರೆ, ಸಿದ್ಧಾಂತವು ಹರಿದಾಸರಿಂದಾಗಿ ವಿಶ್ವಧರ್ಮದ ವೇದಿಕೆಯ ಮೇಲೆ ಪ್ರತಿಷ್ಠಿತವಾದವು. ಭಾರತವರ್ಷದ ಪ್ರಾತಿನಿಧಿಕ, ಪ್ರಧಾನ ಸಿದ್ಧಾಂತವೇ ಹರಿದಾಸ ಸಾಹಿತ್ಯವೆನಿಸಿತು. ಸಮಗ್ರ ಭಾರತೀಯರ ಮಹನೋಧರ್ಮವೆನಿಸಿತು. ರಾಮಾಯಣ,





ಮಹಾಭಾರತ, ಭಾಗವತಗಳಿಂದ ನಿರ್ಮಿತ, ಸಮೂಹ ಸಮ್ಮತ ಸಂಸ್ಕೃತಿಯೇ ಹರಿದಾಸ ಸಾಹಿತ್ಯವಾಯಿತು. ಆರ್ಷ ಚಿಂತನೆ, ಶಾಸ್ತ್ರ ಸಿದ್ಧಾಂತಗಳು ಆಡುಭಾಷೆಯಲ್ಲಿ ಜನರ ಹತ್ತಿರ ಸುಳಿದವು. ಅದುವೇ ಹರಿದಾಸ ಸಾಹಿತ್ಯವಾಯಿತು.

ಇಂತಹ ಹರಿದಾಸರ ವಿಶಾಲ ಸಾಹಿತ್ಯದಲ್ಲಿ "ಮುಂಡಿಗೆ"ಗಳು ಒಂದು ವಿಶಿಷ್ಟ ಪ್ರಕಾರ. "ಪರೋಕ್ಷ ಪ್ರೀಯಾಯಿ ದೇವಾಃ" ವೇದವು ನೇರವಾಗಿ ಯಾವ ವಿಚಾರಗಳನ್ನು ಹೇಳುವುದಿಲ್ಲ. ಪರೋಕ್ಷವಾಗಿ ಹೇಳುವುದು ಅದರ ಶೈಲಿ. ಅದು ರೂಪಕ, ಇಲ್ಲವೇ ಸಂಖ್ಯೆಗಳ ಮೂಲಕವೇ ತನ್ನ ವಿಚಾರಗಳನ್ನು ಪ್ರಕಟಿಸುವುದು.

**ಚತ್ವಾರಿ ಶೃಂಗಾಃ ತ್ರಯೋ ಅಸ್ಯ ಪಾದಾಃ ದ್ವೇ ಶೀರ್ಷೇ ಸಪ್ತಹಸ್ತಾಸೋ ಅಸ್ಯ**

**ತ್ರಿಧಾಬದ್ಧಃ ಋಷಭೋಃ ರೋರವೀತಿ ಮಹಾದೇವೋ ಮರ್ತ್ಯಾಗ್ಂ ಆವಿವೇಶ॥**

– ಋಗ್ವೇದ IV.೫೮.೩.

**"ಗೌರೀರ್ಮಿಮಾಯ ಸಲಿಲಾನೀತ್ಯೇಕಪದೀ ದ್ವಿಪದೀ ಸಾ ಚತುಷ್ಪದಿ,**

**ಅಷ್ಟಾಪದೀ ನವಪದೀ"** – ಋಗ್ವೇದ

ಹೀಗೆ ಗುಹ್ಯವಾಗಿ, ಮುಂಡಿಗೆಯ ರೂಪದಲ್ಲಿ ಮಾತನಾಡುವುದು ವೇದದ ಪದ್ಧತಿ. ಬೌದ್ಧಿಕ ಶ್ರಮವಿರದೇ ಜ್ಞಾನ ನೀಡುವುದಿಲ್ಲ. ಇವಕ್ಕೆ ತುಂಬಾ ವಿಶಿಷ್ಟ ಅರ್ಥಗಳಿವೆ.

**ಸುಳ್ಳು ನಮ್ಮಲ್ಲಿಲ್ಲವಯ್ಯಾ!**

**ಸುಳ್ಳು ನಮ್ಮಲ್ಲಿಲ್ಲವಯ್ಯಾ ಸುಳ್ಳೇ ನಮ್ಮನಿ ದೇವರು ॥ಪ॥**

**ಇಲಿಯು ಒಲೆಯ ಚಾಚುದು ಕಂಡೆ**

**ಬೆಕ್ಕು ಭಕ್ಕರಿ ಮಾಡೋದು ಕಂಡೆ ॥1॥**

**ಮೆಕ್ಕೇ ಕಾಯಿ ಕಂಡೆನವ್ವಾ, ತೆಕ್ಕೆ ಘಡತರ**

**ಕಪ್ಪೆ ಪಾತರ ಕುಣಿಯುದು ಕಂಡೆ**

**ಏಡಿ ಮದ್ದಳೆ ಬಡಿಯುದು ಕಂಡೆ ॥2॥**

**ತೊಂಡೇಕಾಯಿ ಕಂಡೇನವ್ವ ಹಂಡೇಗಾತರ**

**ಅರಿಷಿಣ ಪುಡಿಯ ಬಿತ್ತುದ ಕಂಡೆ**

**ಗಸಗಸೆ ಎಣಿಸುದು ಕಂಡೆ ॥3॥**

**ಪುರಂದರ ವಿಠ್ಠಲನ ಪಾದವ ಕಂಡೆ ಪರ್ವತ ಘಡತರ**

ಇದು ಪರಂದರದಾಸರ ಮುಂಡಿಗೆ. ಮಂಡಿಗೆಯಂತೆ ಓರೆಕೋರೆಗಳಲ್ಲಿಯೂ ಸ್ವಾರಸ್ಯ ತುಂಬಿದೆ. ಸನಾತನ ವೈದಿಕ ಸಿದ್ಧಾಂತದ ಮುಖ್ಯ ತತ್ವವನ್ನೇ ಇಲ್ಲಿ ಕೇಂದ್ರ ಬಿಂದು ಮಾಡಿದ್ದಾರೆ. ಆ ಪಲ್ಲವಿಯ ಮೂಲಕ ಅನೇಕ ವಿಚಾರಗಳನ್ನು ಪಲ್ಲವಿಸಿದ್ದಾರೆ. **"ಎಲ್ಲವೂ ಮಿಥ್ಯಾ, ಸುಳ್ಳು"** ಎಂಬ ತತ್ವದ ಅಡಿಯಲ್ಲಿ ಯಾವುದಕ್ಕೂ ಅಸ್ತಿತ್ವವೇ ಇಲ್ಲದಾಗುತ್ತದೆ. ಯಾವುದೇ ತತ್ವ, ಪ್ರಮಾಣ, ವಸ್ತುಗಳು, ಎಲ್ಲವನ್ನೂ ನಿರಾಕರಿಸಿದಾಗ ಪ್ರಪಂಚವನ್ನು ಶೂನ್ಯವೆಂದಂತಾಗುವದು.

ನಾಸ್ತಿಕನು ಕಣ್ಣಿಗೆ ಕಾಣದ ವಸ್ತುವನ್ನು ಸುಳ್ಳೆನ್ನುವ. ಎಲ್ಲವೂ ಸುಳ್ಳೆನ್ನುವ ಈ ತತ್ವ ಕಣ್ಣಿಗೆ ಕಾಣುವ, ಅನುಭವಕ್ಕೆ ಬರುವುದೆಲ್ಲವನ್ನೂ ಇಲ್ಲವೆನ್ನುವದು. ಇದು ಸಾಹಸದ ಮಾತು. ಅವೈಜ್ಞಾನಿಕ ವಿಚಾರ. ವಾಸ್ತವದ ಬದುಕಿಗೆ ನಿಷ್ಕ್ರಿಯಗೊಳಿಸುವ, ನಿರಾಸೆ ತರಿಸುವ, ಧರ್ಮ, ಕರ್ಮ, ಭಕ್ತಿಗಳ ಬಗ್ಗೆ ನಿರಾಸಕ್ತಿ ಹುಟ್ಟಿಸುವ ವಿಚಾರವಿದು. ಎಲ್ಲವೂ ಸುಳ್ಳಾದಾಗ ಬದುಕು ಸ್ವಚ್ಛಂದವಾಗುವದು. ಧರ್ಮ ಅರ್ಥಹೀನ ಆಡಂಬರವೆನಿಸುವುದು. ಆದ್ದರಿಂದ ದಾಸವಾಣಿ:

**ಸುಳ್ಳು ನಮ್ಮಲ್ಲಿಲ್ಲವಯ್ಯಾ!'**

ಜಗತ್ತಿನಲ್ಲಿ ಜ್ಞಾನವನ್ನು ಮಾಡಿಕೊಡುವ ಪ್ರಮಾಣ ಪ್ರಪಂಚ ಎಂದಿಗೂ ಸುಳ್ಳಲ್ಲ. ಪ್ರಮಾಣಗಳೇ ಸುಳ್ಳಾದರೇ ಎಲ್ಲರಿಗೂ ಜ್ಞಾನವಾಗುವ ಬಗೆ ಹೇಗೆ? ವ್ಯವಹಾರ ಹೇಗೆ ನಡೆಯುವುದು? ಕಾರಣವಿಲ್ಲದೇ ಕಂಡದ್ದನೆಲ್ಲ ಸುಳ್ಳು ಎನ್ನುವದೇ? ಎಲ್ಲವನ್ನೂ ಸುಳ್ಳೆನ್ನಲು ವೇದ ಉಪನಿಷತ್ತುಗಳ ವಾಕ್ಯವನ್ನು ಪ್ರಮಾಣವೆಂದು ಉದಾಹರಿಸಬೇಕು. ಹಾಗಾದರೆ ವೇದ ಉಪನಿಷತ್ತಾದರೂ ಪ್ರಮಾಣ, ಸತ್ಯ, ಸುಳ್ಳಲ್ಲ ಎನ್ನಬೇಕು. ಹಾಗೆ ಅಂದರೆ ಎಲ್ಲವೂ ಹೇಗೆ ಸುಳ್ಳಾಗುವದು. ಎಲ್ಲವೂ ಸುಳ್ಳೆಂದು ತಿಳಿಸುವ, ಸಾಧಿಸುವ ಪ್ರಮಾಣ ತಾನೇ ಸುಳ್ಳಾದರೆ ಉಳಿದಿದ್ದನ್ನು ಸುಳ್ಳೆಂದು ತಿಳಿಸುವ, ಸಾಧಿಸುವ ಪ್ರಮಾಣ ತಾನೇ ಸುಳ್ಳಾದರೆ ಉಳಿದದ್ದನ್ನು ಸುಳ್ಳೆಂದು ಸಾಧಿಸುವುದು ಹೇಗೆ? ತಾನು ಸತ್ಯವಾದರೆ ಎಲ್ಲವು ಸುಳ್ಳೆಂದು ಸಾಧಿಸುವದು ಹೇಗೆ? ತಾನು ಸತ್ಯವಾದರೆ ಎಲ್ಲವೂ ಸುಳ್ಳೆಂದು ಸಾಧಿಸದೇ, ಕೆಲವು ವಸ್ತುಗಳನ್ನು ಬಿಟ್ಟು ಉಳಿದದ್ದು ಸುಳ್ಳು ಎನ್ನಬೇಕಾಗಬಹುದು "ಮಿಥ್ಯಾಯಾ: ಸಾಧಕತ್ವಂ ಚ ನ ಸಿದ್ಧಂ ಪ್ರತಿವಾದಿನಃ ತಚ್ಚ ಮಿಥ್ಯಾ ಪ್ರಮಾಣೇನ ಸತಾವಾ ಸಾಧ್ಯತೇತ್ರಯೊ ಸತಾಚೇತ್ ದ್ವೈತ ಸಿದ್ಧಿ: ಸ್ಯಾತ್ ನ ಸಿದ್ಧಂ ಚನ್ಯ ಸಾಧನಂ ಪ್ರಮಾಣಗಳು ಸುಳ್ಳಾದರೆ ಏನನ್ನೂ ಸಾಧಿಸಲಾರವು. ಯಾವ ಪ್ರಮಾಣಗಳು ಸುಳ್ಳಲ್ಲ.



ಎಲ್ಲವೂ ಸತ್ಯ. ಎಲ್ಲರ ಅನುಭವ ಜಗತ್ತಿನ ಬಗ್ಗೆ, ಪ್ರಮಾಣಗಳ ಬಗ್ಗೆ ಸತ್ಯವೆಂದೇ ಇದೆ. ಕಾಣುವ ಪ್ರಪಂಚ, ಪ್ರಕೃತಿ, ವಿಶ್ವ ಇದೆಲ್ಲವೂ ಸುಳ್ಳೆಂದು ಮಾತ್ರ, ಯಾರ ಅನುಭವವೂ ಇಲ್ಲ. ಅನುಭವವೇ ಈ ಪ್ರಮಾಣಗಳ, ಪ್ರಪಂಚದ ಸತ್ಯತ್ವವನ್ನು ಸಾರುವದು.

ಅನುವ್ಯಾಖ್ಯಾನ ೧- ೧- ೧-

**ಸುಳ್ಳೇ ನಮ್ಮನಿ ದೇವರು**

ದೇವರಲ್ಲಿ ಇದ್ದ ಗುಣ, ರೂಪ, ಕ್ರಿಯಾ, ಜ್ಞಾನ ಇವೆಲ್ಲವನ್ನೂ ಕೆಲವು ವೈದಿಕರು ಅಲ್ಲಗಳೆಯುವರು. ದೇವರು ನಿರಾಕಾರ. ಏಕೆಂದರೆ ಆಕಾರವಿದ್ದುದು ಅನಿತ್ಯ, ಮಿತವಾದದ್ದು. ದೇವರು ಅಮಿತ, ನಿತ್ಯ ಆದ್ದರಿಂದ ನಿರಾಕಾರ, ಅವನಲ್ಲಿ ಯಾವ ಧರ್ಮಗಳಿಲ್ಲ. ಆದ್ದರಿಂದ ಅವನು ನಿರ್ಗುಣ, ಕ್ರಿಯೆ ಉಳ್ಳವನು ಸಾಮಾನ್ಯ ಕ್ರಿಯಾಧೀನ. ದೇವರು ನಿಷ್ಕ್ರೀಯ, ನಿರ್ಗುಣ, ಅವನು ವ್ಯಾಪಕ. ಅವನನ್ನು ಯಾವ ಶಬ್ದಗಳೂ ತಿಳಿಸಲಾರವು. ಮಿತವಾದವುಗಳು ಶಬ್ದಗಳಿಂದ ಹೇಳಲ್ಪಡುವುದು. ಸೀಮಿತಿ ಶಬ್ದಶಕ್ತಿಗಳಿಗೆ ದೇವರು ನಿಲುಕಲಾರ ಆದ್ದರಿಂದ ದೇವರು ಯಾವ ಶಬ್ದಗಳಿಂದಲೂ ಹೇಳಲು ಬಾರದ "ಅವಾಚ್ಯ", ಅನಿರ್ವಾಚ್ಯ, ಅಶಬ್ದ ಎಂದು ನಿರಾಕರಿಸುವರು. ಆದರೆ ಹರಿದಾಸವಾಣಿ ಹಾಗಲ್ಲ. ದೇವರಲ್ಲಿ ಗುಣ ಇದ್ದದ್ದು ಸುಳ್ಳೇ? ಅವನು ಶಬ್ದದಿಂದ ಹೇಳಲ್ಪಡುವನೆಂದೇ ಇಷ್ಟು ವಿಸ್ತಾರವಾದ, ವ್ಯಾಪಕವಾದ ವೇದಾದಿ ಶಾಸ್ತ್ರಗಳು ಅವನನ್ನು ತಿಳಿಸಲು ಹೊರಟಿವೆ.

**"ವೇದೈಶ್ಚ ಸರ್ವೈ: ಅಹಮೇವ ವೇದ್ಯ:" – ಗೀತಾ**

**"ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ"**

**"ಆದಾವಂ ತೇಚ ಮಧ್ಯೇಚ ವಿಷ್ಣು: ಸರ್ವತ್ರ ಗೀಯತೇ" – ಹರಿವಂಶ**

**"ವೇದಾಹ್ಯೇವ ಏನಂ ವೇದಯಂತಿ"**

**"ಅನ್ವಯಃ ಸರ್ವಶಬ್ದಾನಾಂ ಗುಣ ಸರ್ವಸ್ವ ವೇದಕ:" – ೧-೧-೨೩೪.**

**"ಶಬ್ದ ಪ್ರವೃತ್ತಿ ಹೇತೂನಾಂ ತಸ್ಮಿನ್ ಮುಖ್ಯ ಸಮನ್ವಯಾತ್" – ಅನುವ್ಯಾಖ್ಯಾನ**

ಆದ್ದರಿಂದ ದೇವರು ಇಷ್ಟು ಅದ್ಭುತವಾದ ಪ್ರಪಂಚ ನಿರ್ಮಿಸಿದ್ದಾನೆ. ಅನಂತ ಅವತಾರ ಧರಿಸಿದ್ದಾನೆ. ಅನಂತ ಜೀವರಲ್ಲಿ ಇದ್ದು ಪ್ರೇರಕನಾಗಿದ್ದಾನೆ.

**ಸುಳ್ಳೇ ನಮ್ಮನಿ ದೇವರು**

ಈ ಶರೀರವೇ ನಮ್ಮ ಮನೆ. ಇದನ್ನು ನಾವು ವಾಸಿಸುವ 'ಪುರ' ಎನ್ನುವರು. ಆದ್ದರಿಂದ ನಾವು ಪುರಂಜನರು. ಈ ನಶ್ವರ ದೇಹ ಮೇಲಿಂದ ಮೇಲೆ ಪಡೆಯುವದು, ಬಿಡುವದಕ್ಕಿಂತಾ ನಿರಂತರ ದೇಹ ಸಂಬಂಧ ಬರದಂತೆ ನಾವು ನಮ್ಮ ನಿಜವಾದ ರೂಪದಲ್ಲಿ ಇರಲು ಯತ್ನಿಸುವುದೇ ಸಾಧನ. ಇದೇ ಬಂದ ನಿವೃತ್ತಿಯ ಯತ್ನ. ಈ ಸತ್ಯವಾದ ದೇಹದ ಸಂಬಂಧ, ಅದರಿಂದಾಗುವ ಸುಖದುಃಖ, ವಿಕಾರಗಳು ಸುಳ್ಳಲ್ಲ. ಕೆಲವರ ದೃಷ್ಟಿಯಲ್ಲಿ ಸತ್ಯ ನಾಶವಾಗಲಾರದು. ನಾಶವಾದರೆ ಅದೆಂತಹ ಸತ್ಯ. ಸಂಸಾರ, ಶರೀರ ಬಂಧನ, ದುಃಖಗಳು ಶಾಸ್ತ್ರಜ್ಞಾನದಿಂದ ನಾಶವಾಗುವುದಾದರೆ ಅವೆಲ್ಲವೂ ಸುಳ್ಳು. ಇಲ್ಲದವುಗಳು ಇವೆ ಎಂದು ಭ್ರಮಿಸಿದ್ದೇವೆ ಎನ್ನುವರು. ಅದಕ್ಕೆ ದಾಸರು ಪ್ರಶ್ನಿಸುವರು. "ಸುಳ್ಳೇ ನಮ್ಮನೆ"? ಈ ಶರೀರ, ಸಂಸಾರ, ಜಂಜಾಟಗಳು ಸುಳ್ಳೇ? ಇವು ಸತ್ಯವಾದರೆ, ಇವುಗಳ ಪರಿಣಾಮ, ಪ್ರಭಾವ, ವಿಕಾರಗಳು ಸತ್ಯವಾದರೆ ಆಗ ಇವುಗಳ ತೊಂದರೆಯಿಂದ, ಬಂಧನದಿಂದ ಬಿಡುಗಡೆ ಹೊಂದಲು ಯತ್ನಿಸುವುದು ಉಚಿತವಾಗುವುದು. ಇಷ್ಟೆಲ್ಲ ನೀಡಿದ ಭಗವಂತ ಸುಳ್ಳೆ ಹಾಗೆಂದರೆ ಸುಳ್ಳಲ್ಲ ಎಂದರ್ಥ. –ಸತ್ಯಂ, ಪರಂ, ಧೀಮಹಿ ಸತ್ಯನಾಗಿದ್ದಾನೆ.

**ಇಲಿಯು ಒಲೆಯ ಚಾಚದು ಕಂಡೆ!**

ಈ ಮನೆಯಲ್ಲಿ ದೇವರಿದ್ದಾರೆ. ಆದರೂ ಈ ದೇಹಗೇಹದಲ್ಲಿ ಅನೇಕರ ಆಡಳಿತವಿದೆ. ಇಲ್ಲಿಯ ಇಂದ್ರಿಯಗಳು ಉರಿಯುವ ಬೆಂಕಿಗಳು. ಸದಾ ಇಂಧನದ ಬಯಕೆ. ಹಾಕಿದಷ್ಟೂ ತಿನ್ನುವವು. ಸಾಕೆನ್ನುವ ಮಾತೇ ಇಲ್ಲ. ಇವೇ ("ಮಹಾಶನಃ ಮಹಾಪಾಪ್ಮ") ಒಂದೊಂದು ಇಂದ್ರಿಯಗಳೂ ಒಂದೊಂದು ಬೆಂಕಿಯ ಕುಂಡಗಳು. ಇಲ್ಲಿ ಭೋಗದಾಸೆಯ ಬೆಂಕಿಯನ್ನು ಈ ಇಲಿಯು ಚಾಚುತ್ತಿದೆ. ಇಲಿಯು ಮತ್ತಾವುದಲ್ಲ, ನಮ್ಮ ಮನಸ್ಸೇ/ "ಮುಷ್ ಚುರ್" ಕಳ್ಳತನದ ಕಾರ್ಯ ಮನಸ್ಸಿನ ಸ್ವರೂಪ. ಎಲ್ಲೆಡೆಗೂ ಅವಕಾಶ ಮಾಡಿಕೊಂಡು ನುಸುಳುವುದು ಇಲಿಯ ಧರ್ಮ. ಇದೇ ಮನಸ್ಸಿನ ಸ್ವರೂಪ[೧]. (ಯ ಅಸ್ತೇ ಮನಸಾಸ್ಮರನ್) ಕರ್ಮೇಂದ್ರಿಯಗಳನ್ನು ಮೇಲೆ ಮೇಲೆ ತಡೆಹಿಡಿದರೂ ಮನಸ್ಸಿನಲ್ಲ ಇವೆಲ್ಲ ವಾಸನೆಗಳು ಪ್ರಬಲವಾಗಿರುತ್ತವೆ. ಅದೇ ಆ ಇಂದ್ರಿಯಗಳಲ್ಲಿ ದಾಹಾಗ್ನಿ ಇಚ್ಛೆಯನ್ನು ಪ್ರಬಲಗೊಳಿಸುವದು. ಇದೇ ಈ ಇಲಿಯ ಇಂದ್ರಿಯಗಳಲ್ಲಿ ದಾಹಾಗ್ನಿ

೧. ಮನೋಯುಂಕ್ತೇ ವಿವಕ್ಷಯಾ ಮನಃ ಕಾಯಾಗ್ನಿಂ ಆಹುತಿಸಂಪ್ರೇರಯತಿ॥



ಇಂದ್ರಿಯಗಳ ಹಸಿವನ್ನು ಹೆಚ್ಚಿಸುವದು. ಭೋಗದ ಇಚ್ಛೆಯನ್ನು ಪ್ರಬಲಗೊಳಿಸುವುದು. ಭೋಗದ ಮಂದವಾದ ಅಗ್ನಿಯನ್ನು ಇನ್ನಷ್ಟು ಹೆಚ್ಚಿಸುವದು. ಕಾಮ, ಇಚ್ಛೆ, ಅಂಜಿಕೆ, ನಾಚಿಕೆ, ಚಂಚಲತೆ, ಸಂಶಯ, ತಿಳುವಳಿಕೆ, ಸಂಸ್ಕಾರ ಇವೆಲ್ಲವೂ ಮನಸ್ಸಿನ ರೂಪಗಳೇ. ಈ ಇಲಿಯು(ಮನಸ್ಸು) ಇಂದ್ರಿಯಗಳಲ್ಲಿ ಅಪಾರ ದಾಹವನ್ನು, ಇಚ್ಛೆ ಕ್ರಿಯೆಗಳನ್ನು ಹುಟ್ಟಿಸಿ ಎಲ್ಲ ವಿಧದ ಭೋಗಗಳಲ್ಲಿ ತೊಡಗಿಸುವುದು. ಈ ಮನಸ್ಸಿಗೆ ಐದು ವೃತ್ತಿಗಳು[೨]. ಮನಸ್ಸು, ಬುದ್ಧಿ, ಅಹಂಕಾರ, ಚಿತ್ರ, ಚೇತನವೆಂದು ಬೇಕು ಬೇಡಗಳೆಂಬುದೇ ಒಳ್ಳೆಯ. ಕೆಟ್ಟ ಬಯಕೆಗಳೆಲ್ಲವೂ ಮನಸ್ಸು ಎನಿಸುವದು.

**ಬೆಕ್ಕು ಭಕ್ಕರಿ ಮಾಡುದು ಕಂಡೇ!**

ಸದಾ ಹಾಕಿದಷ್ಟೂ ಬೇಕು, ಬೇಕು ಎನ್ನುವ ಇಂದ್ರಿಯಗಳು ಬೆಕ್ಕುಗಳು. ಬೇಕು ಬೇಕು ಎನ್ನುವ ಸ್ವಭಾವವೇ ಇಂದ್ರಿಯಗಳದು. ಅಂತೆಯೇ ಬೇಕೆನ್ನುವ ಇವುಗಳನ್ನು ಬೆಕ್ಕು ಎನ್ನುವರು.

ಇಂದ್ರಿಯಗಳು ಬಯಸಿದ್ದನ್ನು ನೀಡಿದಾಗ ಬೇಕಾದಷ್ಟೂ ನೀಡಿದರೂ ಸಾಕೆನ್ನುವ ಭಾವ ಹೊಂದಿಲ್ಲ. ಇಂದ್ರಿಯಗಳಲ್ಲಿ ಶಕ್ತಿ ಕುಂಠಿತವಾದರೂ ಇಚ್ಛೆ, ಆಸೆ ಬೆಳೆದಿದೆ. ಬೇಕೆನ್ನುವದು ನಿಂತಿಲ್ಲ. ನಿರ್ವಿಣ್ಣತೆ ಹೆಚ್ಚಿದೆ. ಆದರೂ ವಿಷಯ ಕಂಡಾಕ್ಷಣ ಬೇಕೆಂದು ಬಯಸುತ್ತವೆ. ಸದಾ ವಿಷಯದ ವಾಸನೆಯಲ್ಲಿಯೇ ಇದ್ದು, ಪಡೆಯುವ, ಅನುಭವಿಸುವ, ಹೊಂಚು, ಸಂಚುಗಳಲ್ಲಿಯೇ ಈ ಇಂದ್ರಿಯಗಳು ಎಚ್ಚರಿಕೆಯಿಂದಿರುತ್ತವೆ. ಇದೇ ಈ ಬೆಕ್ಕಿನ ಕಾರ್ಯ. ಮನಸ್ಸು ಇಂದ್ರಿಯಗಳೆಂಬ ಒಲೆಯಲ್ಲಿ ಕಾಮಕ್ರೋಧಗಳೆಂಬ ಬೆಂಕಿಯನ್ನು, ಆಸೆ, ಇಚ್ಛೆಗಳೆಂಬ ಜ್ವಾಲೆಯನ್ನು, ದೇಹದಲ್ಲಿ ದಾಹವನ್ನು, ಭೋಗದ ಕಿಚ್ಚೆಯನ್ನು ಹೆಚ್ಚಿಸುವವು. ಒಲೆ ಉರಿಯತೊಡುಗುವದು. ಮನಸ್ಸು ವಿಷಯಗಳ (ಶಬ್ದ ಸ್ಪರ್ಶ ರೂಪ ರಸಗಂಧ) ಅನುಭವಕ್ಕೆ ಹಾತೊರೆತೊಡಗುವದು. ಈ ಕಾಮಾಗ್ನಿ ಬೆಳೆದಾಗ ಅದನ್ನು ಆರಿಸುವದು ಅಸಾಧ್ಯ. ಭೋಗವೇ ಭಕ್ಕರಿ ಆಗಿರುತ್ತದೆ.

**ಮೆಕ್ಕೆಕಾಯಿ ಕಂಡೆನಯ್ಯಾ ತೆಕ್ಕೆ ಗಡತರ**

ಕಾಯಿ ಇದು ಅಪಕ್ವ, ಬುದ್ಧಿಯ ಸಂಕೇತ. ಹಣ್ಣು ಪಕ್ವತೆಯ ಸಂಕೇತ. ಅಪಕ್ವ ಬುದ್ಧಿಯಲ್ಲಿ ಕಂಡು ಬರುವ ಫಲ ಯಾವುದು? "ಮ್ಯೆ. ಕ್ಕೇ" ಕಾಯಿ "ಮೇ",

೨. ಸಂಕಲ್ಪ ವಿಕಲ್ಪರೂಪಂ ಮನಃ ಶ್ರುತಸ್ಯ ನಿಶ್ಚಯೇಚ್ಛಾ ಬುದ್ಧಿಃ ಅಸ್ವಾರೋಪೇ ಸ್ವರೂಪಮಿತಿ ಇಚ್ಛಾ ಅಹಂಕಾರ ಸ್ಮರಣೇಚ್ಛಾ ಚಿತ್ತಮ್ ಚೇತೂವ್ಯಾಪ್ತಿಶ್ಚ ಚೇತನಾ ಇತಿ ॥ಷೋಡಶೀ॥

"ಮೇ" ಎಲ್ಲವೂ ನನಗೇ ಬೇಕು. ನನ್ನದಾಗಬೇಕು. ಇದು ಮಮಕಾರ. ಇದು ಪ್ರಬಲವಾದದ್ದು. ಎಲ್ಲವೂ ನನಗೇ ಬೇಕೆಂಬುದಕ್ಕೆ ಯಾರಾದರೂ ವಿರೋಧಮಾಡಿದರೆ (ಕಾಮಾತ್ ಕ್ರೋಧೋ ಅಭಿಜಾಯತೇ) "ಕೇ" "ಕೇ" ಯಾರು? ಯಾರವರು? ನನ್ನ ಪ್ರಬಲವಾದ ಸ್ವಾರ್ಥಕ್ಕೆ, ಮಹತ್ವಾಕಾಂಕ್ಷೆಗೆ, ವಿರೋಧಿ ಯಾರವರು? ಅವರು ನನ್ನ ವಿರೋಧಿಗಳು. ನಮ್ಮೆಲ್ಲರ ಅಹಂಕಾರ ಮಮಕಾರಗಳೇ ಪ್ರಬಲವಾದ "ಮೆಕ್ಕೆ" ಕಾಯಿ. ಇದು ನಿಷಿದ್ಧ. ವಗರು, ಕಹಿ. ಇದು ನಿಷಿದ್ಧ, ವಗರು, ಕಹಿ. ಆದರೆ ನಾವು ಅದನ್ನು ಸಿಹಿ ಎಂದು ಭಾವಿಸಿದ್ದೇವೆ. ಈ "ಮೆ" "ಕೈ" ಕಾಯಿ ನಮ್ಮ ಬದುಕಿನಲ್ಲಿ ಸಣ್ಣದಿಲ್ಲ. ನಮ್ಮ ತೋಳ ತೆಕ್ಕೆಯಲ್ಲಿ ತುಂಬಿದೆ. ನಮ್ಮ ಮೈ, ಮನಗಳಿಗೆ ಪೂರ್ತಿ ಅಪ್ಪಿಕೊಂಡಿದೆ. ಅದರ ಆಲಿಂಗನವು ನಮ್ಮಿಂದ ಬಿಡಿಸಿಕೊಳ್ಳಲಾಗದಷ್ಟು ಪ್ರಬಲವಾಗಿದೆ. ಅಹಂಕಾರವು ಬದುಕಿನಲ್ಲಿ ಪೂರ್ಣವಾಗಿ ಆವರಿಸಿದೆ. ಅಪ್ಪುಗೆಯಲ್ಲಿ ಸದಾ ಹಿಡಿಯುವಷ್ಟು ಇವು ದೊಡ್ಡದಾಗಿವೆ. ಅಂತೆಯೇ ಈ ಸಂಸಾರವು ಜೀವನದಲ್ಲಿ ನಿರಂತರವಾಗಿದೆ.[೩]

## ಕಪ್ಪೇ ಪಾತರ ಕುಣಿಯುದು ಕಂಡೆ!

'ಕ' ಕರ್ಮಫಲ, ಅದನ್ನು (ಪಿಬಂತಿ) ಕುಡಿಯುತ್ತಾರೆ, ಅನುಭವಿಸುತ್ತಾರೆ. ಆದ್ದರಿಂದ ದೇಹಧಾರಿಗಳಾದ ಕರ್ಮಫಲಾನುಭವಿಗಳೆಲ್ಲ ಕಪ್ಪೆಗಳು. ಈ ಜೀವರಾಶಿಗಳು ಕಪ್ಪೆಗಳು. ಇವು ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ, ಈ ದೇಹದಿಂದ ಇನ್ನೊಂದು ದೇಹಕ್ಕೆ ಜಿಗಿಯುವವು. ಹಾರುವುವು. ಇದೇ ಈ ಜೀವರ(ಕಪ್ಪೆಗಳ) ಸ್ವಭಾವ. ತ್ರಿಗುಣಗಳ ಬಂಧನ ಅವುಗಳ ಪರಿಣಾಮದಿಂದಾಗಿ ಈ ಕ್ಷಣ ಸಾತ್ವಿಕ ಬುದ್ಧಿ, ಕರ್ಮ, ಆಹಾರ, ಮನಸ್ಸು ಉಳ್ಳವನು ಮತ್ತೊಂದು ಕ್ಷಣದಲ್ಲಿಯೇ ರಾಜಸ, ಇಲ್ಲವೇ ತಾಮಸ ಬುದ್ಧಿ, ಮನಸ್ಸು, ಕರ್ಮಗಳಲ್ಲಿ ತೊಡಗುವ. ಹೀಗೆ ಗುಣಗಳಿಂದ ಗುಣಗಳಿಗೆ, ಕರ್ಮದಿಂದ ಇನ್ನೊಂದು ಕರ್ಮಕ್ಕೆ, ಜಿಗಿದಾಟವು ಈ ಕಪ್ಪೆಯ ಸ್ವಭಾವ. ಒಂದು ಕ್ಷಣ ಹುಟ್ಟಿದ ಭಕ್ತಿ ಇನ್ನೊಂದು ಕ್ಷಣದಲ್ಲಿ ನಾಸ್ತಿಕ ಸ್ವಭಾವವಾಗುವದು. ಇದೇ ಈ ಕಪ್ಪೆಗಳ ಹಾರುವ ಸ್ವಭಾವ. (ಕಂ ಸುಖಂ ಪಿಬಂತಿ, ಪಾಂತಿ, ಇತಿ ಕಪಿ, ಕಪ್ಪಿ) ಸದಾ ಸುಖಕ್ಕಾಗಿ ಅಲೆಯುವ, ಹಾರುವ, ಜಿಗಿಯುವ ಸ್ವಭಾವ ಹೊಂದಿದೆ. ಈ ಕಪ್ಪೆಗಳು (ಸುಖದ ಹಂಬಲಿಗಳ) ವಿವಿಧ ಕುಣಿಯುವಿಕೆ ಈ ಪ್ರಪಂಚದಲ್ಲಿ ಕಂಡುಬರುವದು. ಅದರಂತೆ ಪಾತರ ನೋಡಲು ಸುಂದರ, ದೇವರ ಅದ್ಭುತ ಕೃತಿ ಮನೋಹಾರಿ ಇಂಥ ಜೀವರು

---

೩. ಅಭಿಮಾನಾದೇವ ಸಂಸಾರ: "ಅತೋ ಮನಾಭಿಮಾನೇನ ದುಃಖೀ॥ ಭಾ.ತಾ.

ಯಸ್ತು ಈಷದಭಿಮಾನಿ ಸ ಈಷತ್ ಬದ್ಧತೆ" ಗೀ.ಬಾ



ಸದಾನಿರಂತರವಾಗಿ ಕುಣಿಯುತ್ತವೆ. ಅಂತೂ ಈ ಸಂಸಾರದಲ್ಲಿ ಸುಖದ ಹಂಬಲಕ್ಕಾಗಿ ದೊಡ್ಡ ಸಣ್ಣ ಎಲ್ಲ ವಿಧದ ಜೀವಿಗಳು ಕುಣಿದಾಟಕಾಣುತ್ತಿವೆ.

## ಏಡಿ ಮದ್ದಳೆ ಬಡಿಯುದು ಕಂಡೆ

ಏಡಿ ಇದೊಂದು ಚಿಕ್ಕ ಪ್ರಾಣಿ. ಹತ್ತು ಕಾಲು. ಅವುಗಳಿಂದಲೇ ಎಲ್ಲರನ್ನು ಪಟ್ಟಿಯಾಗಿ ಹಿಡಿಯುವದು. ಪಂಚ ಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯಗಳೇ ಈ ಜೀವವೆಂಬ ಏಡಿಯ ಕಾಲುಗಳು. ಮೊಸಳೆ ನೀರಿನಲ್ಲಿ ಮಾತ್ರ ಹಿಡಿಯುವದು. ಕಡಿಯುವದು ಏಡಿ ಮಾತ್ರ ಎರಡೂ ಸ್ಥಳಗಳಲ್ಲಿ ಎಲ್ಲರನ್ನೂ ಹಿಡಿಯುವು. ಸಂಸಾರದಲ್ಲಿ ಮೋಕ್ಷ ಮಾರ್ಗ ವಿರೋಧಿಯಾದ, ಧರ್ಮಮಾರ್ಗಕ್ಕೆ ಪ್ರತಿಬಂಧಕವಾದ, ಇದರ ಹತ್ತು ಕಾಲುಗಳು ಎಲ್ಲರಿಗೂ ಕಡಿಯುವವು, ಕಾಡುವವು. ಇಲ್ಲಿ ಈ ಇಂದ್ರಿಯ ಸುಖಗಳ, ಇಂದ್ರಿಯಗಳ ಮೋಹದ ಮದ್ದಳೆಯೇ ಬಾರಿಸುತ್ತಿದೆ. ಮದ್ದಳೆ ಇದು ಮದ, ಮುದ, ಆನಂದಮಯ ಏರಿದಾಗ ಬಾರಿಸುವ ವಾದ್ಯ. ಎಲ್ಲ ಏಡಿಗಳು (ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯಗಳನ್ನು ಹೊಂದಿದವರೆಲ್ಲ) ಇಂದ್ರಿಯ ಸುಖದಲ್ಲಿ ಮದಭರಿತರಾಗಿ ಮದ್ದಳೆ ಬಾರಿಸುತ್ತಿದ್ದಾರೆ. ರೂಪಗಳನ್ನು ನೋಡಿದ ಮದ ಕಣ್ಣಿಗೆ. ಸೌಂದರ್ಯ ಸವೆದ ಆನಂದ ಅದಕ್ಕೆ. ನೋಡಬೇಕಾದ ಭಗವಂತನ ರೂಪ ನೋಡಲಿಲ್ಲವೆಂಬ ಅರಿವಿಲ್ಲ. ದುಃಖವೂ ಇಲ್ಲ. ಆದರೆ ಹೆಣ್ಣು, ಹಣ, ಹೊನ್ನು ನೋಡಿ ಈ ಏಡಿ ಮದ್ದಳೆ ಬಡಿಯುತ್ತಿದೆ. ಮೂಗು ಸುಗಂಧವನ್ನು ಸವೆದ, ಮೂಸಿಸಿದ ಮದದಲ್ಲಿ ಮದ್ದಳೆ ಬಾರಿಸುತ್ತಿದೆ. ಕೇಕೇ ಹಾಕಿ ಕುಣಿಯುತ್ತಿದೆ. ಕಿವಿ ತನಗಿಷ್ಟವಾದ ಸಂಗೀತವೋ, ತನ್ನ ವರ್ಣನೆಯೋ, ತನ್ನ ಕೀರ್ತಿಯನ್ನೋ ಇನ್ನೊಬ್ಬರ ನಿಂದನೆಯನ್ನೋ ಕೇಳಿ ಕೃತಕೃತ್ಯತೆಯ ಮದ್ದಳೆ ಬಡಿಯುತ್ತಿದೆ.

## ತೊಂಡೇಕಾಯಿ ಕಂಡೇನವ್ವ ಹಂಡೇಗಾತರ

ತೊಂಡೆಕಾಯಿ ಇದೊಂದು ನಿಷಿದ್ಧ ತರಕಾರಿ. ಇದು ತಮೋಗುಣ ಪ್ರಚೋದಕ. ಕಾಮಭಾವನೆಗಳ ಉದ್ದೀಪಕ. ತೊಂಡೇಕಾಯಿ ಎಂಬುದು ಉಪಲಕ್ಷಣ. ಎಲ್ಲರ ಜೀವನದಲ್ಲಿ, ಎಲ್ಲರ ಮನೆಯಲ್ಲಿ, ಮನಸ್ಸಿನಲ್ಲಿ, ಆಹಾರ ವಿಹಾರದಲ್ಲಿ ನಿಷಿದ್ಧವಾದದ್ದೇ ಬೃಹತ್ ಗಾತ್ರದಲ್ಲಿ ಕಂಡು ಬರುತ್ತಿದೆ. ಎಲ್ಲರ ಜೀವನದಲ್ಲಿ ಧರ್ಮಜ್ಞಾನ, ತಿಳುವಳಿಕೆಗಳಿಗಿಂತಾ ಅಭಿರುಚಿಯೇ ಪ್ರಧಾನವಾಗಿ ಕಾರ್ಯ ನಿರ್ವಹಿಸುತ್ತದೆ. ಭಗವಂತನ ಅಪರೋಕ್ಷ ಜ್ಞಾನಕ್ಕೆ ನಿಷಿದ್ಧವಾದದ್ದೆಲ್ಲ ಬಾಧಕ. ನಿಷಿದ್ಧವಾದದ್ದರ ತ್ಯಾಗ

ಅತ್ಯಂತ ಅವಶ್ಯಕ. ಆದರೆ ನಿಷಿದ್ಧವಾದದ್ದೆಲ್ಲ (ತೊಂಡೇಕಾಯಿ) ಹಂಡೆ (ನೀರು ತುಂಬುವ ಬೃಹತ್ ಪಾತ್ರೆ)ಯಷ್ಟು ದೊಡ್ಡ ಗಾತ್ರದಲ್ಲಿ ಎಲ್ಲರ ಜೀವನದಲ್ಲಿ ಕಂಡುಬರುತ್ತಿದೆ.

**ಅರಿಷಿಣ ಪುಡಿಯ ಬಿತ್ತುದ ಕಂಡೆ**

ಅರಿಷಿಣ ಪುಡಿ ಅತಿ ಸೂಕ್ಷ್ಮ. ಪುಡಿಯಲ್ಲಿ ಕಣ ಕಣಗಳನ್ನು ಪ್ರತ್ಯೇಕಿಸಲು ಬರಲಾರದಷ್ಟು ಅದು ಸಣ್ಣದಾಗಿರುತ್ತದೆ. ಇದನ್ನು ಎಲ್ಲೆಡೆಗೂ ಬಿತ್ತುತ್ತಿದ್ದಾರೆ. ಅತಿಸೂಕ್ಷ್ಮ ಅರಿಷಿಣ ಪುಡಿಯಂತೆಯೇ ಇರುವವು ಮನುಷ್ಯನ ಕರ್ಮಗಳು ಮನಸ್ಸಿನಲ್ಲಿ ಪ್ರತಿಕ್ಷಣ ಮೂಡುವ ಭಾವನೆಗಳು, ಇಚ್ಛೆಗಳು ಇವೆಲ್ಲ ಮಾನಸಿಕ ಕರ್ಮಗಳು. ಇವು ಅರಿಷಿಣ ಪುಡಿಯಂತೆ ಅತಿಸೂಕ್ಷ್ಮ. ಆದರೆ ಅಂತಹ ಚಿಕ್ಕಪುಟ್ಟ ಪ್ರತಿಕ್ಷಣದ ಭಾವನೆಗಳೂ ಕರ್ಮಗಳೇ. ಅವಕ್ಕೆ ಪ್ರತ್ಯೇಕವಾದ ಅಸ್ತಿತ್ವವಿದೆ. ಅದು "ಕರ್ಮ"ವಾಗಿ ಕಾಮ, ಕ್ರೋಧ, ಲೋಭ, ಮೋಹ, ಮಾತ್ಸರ್ಯ, ಅಸೂಯೆ, ನಿಂದೆ, ಅಗೌರವ, ನಾಸ್ತಿಕತೆ ಮೊದಲಾದ ಭಾವನೆಗಳು ಮನಸ್ಸಿನಲ್ಲಿ ಸಹಜವಾಗಿ ಮೂಡುತ್ತವೆ. ಅಸ್ಥಿರ, ಕ್ಷಣಿಕವಾಗಿರುತ್ತವೆ. ಆದರೆ ಅಂತಹ ಮೂಡಿದ ಭಾವನೆಗಳೂ ಒಂದೊಂದು ಕರ್ಮಗಳೆನಿಸುವವು. ನಮ್ಮ ಅವುಗಳ ಪರಿಣಾಮವನ್ನು ನಾವು ಅನಿವಾರ್ಯವಾಗಿ ಅನುಭವಿಸುವೆವು. ನಮ್ಮ ಜೀವನದಲ್ಲಿ ಸುಖದುಃಖಗಳ ರೂಪದಲ್ಲಿ ಅಂತಹ ಸೂಕ್ಷ್ಮಭಾವನೆಗಳ ಪರಿಣಾಮವನ್ನು ಅನುಭವಿಸುವೆವು.

**ಗಸಗಸೆಯನ್ನು ಎಣಿಸುದು ಕಂಡೇ**

ಖಸಖಸೆ ಅಥವಾ ಗಸಗಸೆ ಅತಿ ಸಣ್ಣದಾದ ಕಾಳುಗಳು. ಅತೀ ಸೂಕ್ಷ್ಮ ಕೈಯಲ್ಲಿ ಹಿಡಿಯಲು ಬರುವುದಿಲ್ಲ. ಇವುಗಳನ್ನು ಎಣಿಸುವುದು ಅಸಾಧ್ಯ. ಅಶಕ್ಯ. ಅದರಂತೆಯೇ ಮನುಷ್ಯನ ಆಯುಷ್ಯವೂ ಕಾಲ, ಸಮಯಗಳು ನಿತ್ಯ. ಆದರೆ ನಿಮಿಷ, ತ್ರುಟಿ, ಲವ (ಪರಮಾಣು ಕಾಲ) (ಸೆಕೆಂಡು) ಇವೆಲ್ಲವೂ ಕಾಲದ ಅತಿ ಸೂಕ್ಷ್ಮ ಭಾಗಗಳು. ಪ್ರಾಯಃಕಾಲದ ಅತಿ ಸ್ಥೂಲಭಾಗಗಳನ್ನು ವರ್ಷ, ಸಂವತ್ಸರ, ಅಯನಗಳು, ಪಕ್ಷಗಳು ಎಣಿಸಲ್ಪಡುವವು. ಗಣಿಸಲ್ಪಡುವವು ಎಂದೇನೂ ಅಲ್ಲ. ಗಸಗಸೆಯಷ್ಟು ಅತೀ ಸೂಕ್ಷ್ಮವಾದ ಕ್ಷಣಾದಿಗಳೂ ಇಲ್ಲಿ ಪರಿಗಣಿಸಲ್ಪಡುತ್ತವೆ. ಪ್ರತಿಯೊಬ್ಬ ಜನ್ಮ, ಮರಣ, ಆಯುಷ್ಯ ಪ್ರತಿಯೊಂದು ಘಟನೆಯಲ್ಲಿಯೂ ಅತಿ ಸೂಕ್ಷ್ಮ ಕ್ಷಣಗಳನ್ನು ಎಣಿಸಲಾಗುತ್ತದೆ. ಸೂಕ್ಷ್ಮ ಕ್ಷಣಗಳೂ ಇಲ್ಲಿ ಪರಿಗಣಿಸಲ್ಪಡುವವು. ಎಲ್ಲ ನಿರ್ಧಾರಗಳೂ ಅತಿ ಸೂಕ್ಷ್ಮ ಕಾಲಗಣನೆಗೆ ಅನುಗುಣವಾಗಿ ನಡೆಯುವವು. ಎಲ್ಲ ಘಟನೆಗಳು, ಸನ್ನಿವೇಶ, ಸಂದರ್ಭಗಳೂ ಸೂಕ್ಷ್ಮಕಾಲದ ಪರಿಗಣನೆಯ ಮೇಲೆ ಅವಲಂಬಿತವಾಗಿರುತ್ತದೆ. ಅದನ್ನೇ "ಗಸಗಸೆಯನ್ನು ಎಣಿಸುದು ಕಂಡೇ" ಎಂದು ದಾಸರು ನುಡಿದರು.



**ಪುರಂದರವಿಠಲನ ಪಾದವ ಕಂಡೇ ಪರ್ವತಗಾತರ**

ಪರಮಾತ್ಮನ ಪಾದವನ್ನು ಜಗದಾಕಾರವಾಗಿ ಜಗತ್ತಿನಲ್ಲಿಯೇ ವ್ಯಾಪಿಸಿದ ಬಗೆಯಲ್ಲಿ ಕಂಡೆ. ತ್ರಿವಿಕ್ರಮನಾದ ನಮ್ಮ ಬಿಂಬ ಪುರಂದರವಿಠಲನ ಪಾದಗಳು ಸರ್ವತ್ರ ವ್ಯಾಪ್ತವಾಗಿವೆ. ಅವನ ಒಂದು ಪಾದದ ಅಡಿಯಲ್ಲಿ "ವಿಶ್ವಾ ಭೂತಾನಿ" ಜಗತ್ತಿನ ಎಲ್ಲ ಜೀವರೂ, ಜಡಪ್ರಪಂಚಕ, ವಿಶ್ವ, ಅನಂತಬ್ರಹ್ಮಾಂಡಗಳು ಒಂದು ಪಾದದಡಿಯಲ್ಲಿ ಆಶ್ರಿತವಾಗಿವೆ. ಕಣ್ಣಿಗೆ ಕಾಣುವ, ಇರುವದೆಂದು ಕೇಳಿಬರುವ ಎಲ್ಲ ಅನುಭವಕ್ಕೆ ಬರುವ ಎಲ್ಲ ವಿಶ್ವವನ್ನು ಭಗವಂತ ವ್ಯಾಪಿಸಿರುವ. ಎಲ್ಲವೂ ಅವನ ಒಂದು ಪಾದದಡಿಯಲ್ಲಿ ಹಿಡಿಸಲಾರವು. ಅವನ ಪಾದ ಪರ್ವತಗಾತ್ರ, ಪ್ರಪಂಚ ಅತಿ ಸಣ್ಣ ಸಾಸಿವೆಯಂತೆ. ಜಡವಾದ ವಿಶ್ವವಾಗಲೀ, ಅಸ್ವತಂತ್ರರಾದ ಚೇತನರಾಗಲೀ ತಮ್ಮಲ್ಲಿ ಏನಾದರೂ ಪ್ರವೃತ್ತಿಯನ್ನು ಹೊಂದಬೇಕಾದರೆ ಪರಮಾತ್ಮನನ್ನು ತಮ್ಮಲ್ಲಿ ಹೊಂದಲೇಬೇಕು. ದೇವರು ಎಲ್ಲವನ್ನೂ ವ್ಯಾಪಿಸಿರುವದು ಅವನ ಸ್ವಭಾವ. ಅಂತೆಯೇ ಅವನು ದೇಶತಃ ಕಾಲತಃ ಪರಿಪೂರ್ಣ. ಅವನು ಜಗದ್ವ್ಯಾಪಿ. ಜಗದೀಶ್ವರ. "ಮಹತೋಮಹೀಯಾನ್" ಅವನು ಜಗತ್ತನ್ನೇ ವ್ಯಾಪಿಸಿದ ಅವನ ಪಾದಗಳೂ ಬೇರೆಯಲ್ಲ. ದೇವರ ವ್ಯಾಪ್ತಿಯೇ ಅವನ ಪಾದ ವ್ಯಾಪ್ತಿ. ಜಗತ್ತಿಗೆ ಪ್ರೇರಿಸಲು, ಸರ್ವರಿಗೂ ಆಧಾರನಾಗಿ, ಸರ್ವಾಶ್ರಯನಾಗಿ ಇರುವ ದೇವರನ್ನು ಕಂಡದ್ದೇ "ಪರ್ವತ ಗಾತ್ರದ ಪುರುಂದರ ವಿಠಲನ ಪಾದವ ಕಂಡೆ" ಎನ್ನುವರು ದಾಸರು.

**ಉಪಸಂಹಾರ:** ಹೀಗೆ ದಾಸರು ವ್ಯಂಗಾರ್ಥಗಳ ಮೂಲಕ ಅಥವಾ ಧ್ವನಿಯ ಮೂಲಕ, ಗೂಢಾರ್ಥಗಳ ಮೂಲಕ ಜಗತ್ತಿಗೆ ತತ್ವಗಳನ್ನು ತಿಳಿಸುವ ಕಾರ್ಯವನ್ನು ಮಾಡಿದರು. ಇದುವೆ ಮುಂಡಿಗೆ ಸಾಹಿತ್ಯವಾಗಿದೆ. ಬುದ್ಧಿಗೆ ಕೆಲಸವಿಲ್ಲದೆಯಿದ್ದಾಗ ಅದು ತುಕ್ಕು ಹಿಡಿಯುವುದುಂಟು. ಅದಕ್ಕೆ ಕೆಲಸ ನೀಡಿದಾಗ ತತ್ವಜ್ಞಾನದ ಅರಿವು ಮೂಡುತ್ತದೆ. ಎಲ್ಲ ಹರಿದಾಸರು ಈ ರೀತಿ ಅನೇಕ ಮುಂಡಿಗೆ ಪದ್ಯಗಳನ್ನು ರಚಿಸಿದ್ದು, ಅದರಲ್ಲೂ ಪುರಂದರದಾಸರ ಒಂದು ಪದ್ಯದ ಕಗ್ಗಂಟನ್ನು ಬಿಡಿಸುವ ಪ್ರಯತ್ನವಾಗಿದೆ.